# ದಿರಿಸಿನಲ್ಲಿ ಇಂಡೊ ವೆಸ್ಟರ್ನ್ ಸೊಗಸು

ಭಾರತೀಯ ಹಾಗೂ ಪಾಶ್ಚಿಮಾತ್ಯ ಎಂಬ ಎರಡು 'ತೊಡುವ ಸಂಸ್ಕೃತಿ'ಗಳ ಹದವಾದ ಸಮ್ಮಿಳಿತವೇ ಇಂಡೊ ವೆಸ್ಟರ್ನ್ ಶೈಲಿ. ಯುವ ಮನಸ್ಸನ್ನು ಹೆಚ್ಚು ಆಕರ್ಷಿಸಿರುವ ಶೈಲಿ ಆಗಿಯೂ ಇದು ಜನಪ್ರಿಯ.

■ ರೂಪಾ ಕೆ.ಎಂ.



ಸೀರೆಯಾಗಲಿ, ಗಾಗ್ರಾ ಆಗಲಿ ಹಾಕಿಕೊಳ್ಳೋದಕ್ಕೆ ಮಹಾಬೋರು. ಆದರೆ, ಸಮೀಪ ಬಂಧುಗಳ ಸಮಾರಂಭ. ಹಾಗಾಗಿ ಸಾಂಪ್ರದಾಯಿಕ ಶೈಲಿಯಲ್ಲಿರಬೇಕು. ಜತೆಗೆ ಸ್ಟೈಲಿಷ್ ಆಗಿಯೂ ಕಾಣಿಸಬೇಕು ಎನ್ನುವವರಿಗೆ ಇಂಡೊ ವೆಸ್ಟರ್ನ್ ವಿನ್ಯಾಸದ ಬಟ್ಟೆಗಳು ಹೇಳಿ ಮಾಡಿಸಿದಂತಿರುತ್ತವೆ. ಭಾರತೀಯ ಹಾಗೂ ಪಾಶ್ಚಿಮಾತ್ಯ ಎಂಬ ಎರಡು ತೊಡುವ ಸಂಸ್ಕೃತಿಗಳ ಹದವಾದ ಸಮ್ಮಿಳಿತವೇ ಇಂಡೊ ವೆಸ್ಟರ್ನ್ ಶೈಲಿ. ಈಗಂತೂ ಯುವ ಮನಸ್ಸನ್ನು ಹೆಚ್ಚು ಆಕರ್ಷಿಸಿರುವ ಶೈಲಿ ಆಗಿಯೂ ಜನಪ್ರಿಯಗೊಂಡಿದೆ.

ಸಾಂಪ್ರದಾಯಿಕ ಸೀರೆಯನ್ನೇ ಪಾಶ್ಚಿಮಾತ್ಯ ಶೈಲಿಗೆ ಹೊಂದಿಕೆಯಾಗುವಂತೆ ಉಟ್ಟರೆ, ಅದಕ್ಕೆ ಸರಿಹೊಂದುವ ಆಕ್ಸೆಸರೀಸ್ ತೊಟ್ಟರೆ ಮುಗಿಯಿತು. ಇಲ್ಲಿ ಕೇವಲ ಸೀರೆಯಷ್ಟೇ ಅಲ್ಲ, ಗಾಗ್ರಾ, ಬಗೆ ಬಗೆಯ ಚೂಡಿದಾರ್, ಧೋತಿ, ದುಪಟ್ಟಾ ಸೇರಿ ಈ ನೆಲದ ಉಡುಗೆಗಳಿಗೆ ತುಸು ಪಾಶ್ಚಿಮಾತ್ಯ ಶೈಲಿಯನ್ನು ಅಳವಡಿಸಿದರೆ ಸಾಕು ಧರಿಸುವವರ ಅಂದ ಇಮ್ಮಡಿಯಾಗುತ್ತದೆ.

ಸೃಜನಶೀಲತೆಯನ್ನು ರೂಢಿಸಿಕೊಂಡರೆ ಇರುವ ದಿರಿಸನ್ನೇ ಪಾಶ್ಚಿಮಾತ್ಯಕ್ಕೆ ಬದಲಾಯಿಸುವ ಅಸಂಖ್ಯಾತ ಸಾಧ್ಯತೆಗಳು ಇವೆ. ಇವು ಇಂಡೊ ವೆಸ್ಟರ್ನ್ ಪಾರ್ಟಿವೇರ್ ಅಥವಾ ಇಂಡೊ ವೆಸ್ಟರ್ನ್ ಕಾಕ್‌ಟೇಲ್ ವೇರ್ ಎಂಬಿತ್ಯಾದಿ ವಿಶೇಷಣೆಗಳಿಂದಲೂ ಕರೆಸಿಕೊಳ್ಳುತ್ತವೆ.

## ಧೋತಿ ಜತೆ ಕುಚ್ಚಿನ ಸೀರೆ

ಬಿಳಿ ಬಣ್ಣದ ಧೋತಿಗೆ ಚಿನ್ನದ ಬಣ್ಣದ ಸ್ಪೆಗ್ಯಾಟಿ ಟಾಪ್, ಅದರ ಮೇಲೆ ಬಣ್ಣದ ಪ್ರಿಂಟೆಡ್ ಜಾಕೆಟ್. ಅದಕ್ಕೆ ಹೊಂದುವ ಕುಚ್ಚು ಹೆಣೆದ ಸೀರೆ ಅಥವಾ ರೇಷ್ಮೆ ದುಪಟ್ಟಾವನ್ನು ಧರಿಸಬಹುದು. ಬೇಕೆಂದರೆ ಸೊಂಟದ ಪಟ್ಟಿಯಂಥ ಬೆಲ್ಟ್ ಹಾಕಿಕೊಳ್ಳಬಹುದು. ಇದು ನೋಡಲು ಆಕರ್ಷಕವಾಗಿ ಕಾಣುತ್ತದೆ. ಈಗೀಗ ರೇಷ್ಮೆ ಧೋತಿ, ರೇಷ್ಮೆ ಸೀರೆಗಳನ್ನು ಇದೇ ರೀತಿ ಉಡಲಾಗುತ್ತಿದೆ. ತೀರಾ ಸರಳವಾಗಿರುವ ಕ್ಯಾಮಿಸೋಲ್ ಅಥವಾ ಸ್ಪೆಗ್ಯಾಟಿ ಮೇಲೆ ಬಣ್ಣದ ಜಾಕೆಟ್ ಧರಿಸಿ ಅದಕ್ಕೆ ಅನುಗುಣವಾಗಿ ರೇಷ್ಮೆ ಸೀರೆಯನ್ನು ಉಡಲಾಗುತ್ತದೆ.

## ಇಂಡೊ ವೆಸ್ಟರ್ನ್ ಸಿಲೌಟ್

ಇವು ಧೋತಿಯಲ್ಲಿಯೇ ಅರಳಿದ ಸೀರೆ. ಹಲವು ನೆರಿಗೆಗಳಿರುವ ಧೋತಿಗೆ ತೆಳುವಾದ ಪಲ್ಲು ನೀಡಲಾಗಿರುತ್ತದೆ. ಅದಕ್ಕೆ ಹೊಂದಿಕೆಯಾಗುವ